ಹೇಳಿಕೊಟ್ಟಿದ್ದ ಭಾರತದ ಪಶ್ಚಿಮಕ್ಕೆ ಅರಬ್ಬಿ ಸಮುದ್ರ... ಇಲ್ಲಿ ಪೂರ್ವಕ್ಕಿದೆ! ಕಾಡೋ ಕಾಡು! ಬೆಟ್ಟವೋ ಬೆಟ್ಟ! ದೇವರಾಜನಿಗೆ ದಿಗಿಲಾಯ್ತು. ಅವನು ನೋಡಿದ್ದ ಒಂದೇ ಒಂದು ಬೆಟ್ಟ, ಚುಂಚನಗಿರಿಯದು, ಅದೂ ಭೈರವೇಶ್ವರನ ಜಾತ್ರೆಯಲ್ಲಿ. ಅಲ್ಲಿ ಬರಿಯ ಕಲ್ಲುಗಳು. ಇಲ್ಲಿ ಹಸಿರೋ ಹಸಿರು. ಕಾರವಾರ ಖುಷಿ ತಂದಿತು. ಬಸ್ಸು ಕಾರವಾರಕ್ಕೆ ಪ್ರವೇಶಿಸುವಾಗ ಎಡಕ್ಕೆ ಕಡಲು ಮೊರೆಯುತ್ತಿತ್ತು. ಅದರ ಅಲೆಗಳು ನಿಲ್ಲುವ ಅತಿ ಸಮೀಪದಲ್ಲೇ ರಸ್ತೆ. ಆ ರಸ್ತೆಯ ಮೇಲೆ ತಮ್ಮ ಬಸ್ಸು. ದೇವರಾಜನಿಗೆ ಮಜ ಮಜ ಅನ್ನಿಸ್ತು. ಮುಂದಕ್ಕೆ ನೋಡಿದ. ಭಾವನೂ ಅಕ್ಕನಿಗೆ ಏನೇನೋ ವರ್ಣಿಸುತ್ತಿದ್ದರು. ಅಕ್ಕನೂ ಬಾಯ್ಬಿಟ್ಟು ಸಮುದ್ರವನ್ನೂ, ಬಲಕ್ಕಿದ್ದ ಪೇಟೆಯನ್ನೂ ಮಿಟಿ ಮಿಟಿ ನೋಡುತ್ತಿದ್ದಳು. ರಿಕ್ಷಾ ಮಾಡಿಕೊಂಡು ಮನೆಗೆ ಹೊರಟರು. ರಿಕ್ಷಾಗಳೂ ಕುಳ್ಳು ಮಟಾರಿಯಂತಿದ್ದವು. ಬೆಂಕಿ ಪೆಟ್ಟಿಗೆ ಥರಾ ಚಚ್ಚೌಕ. ದೇವರಾಜನ ಬೆರಗು ಅಧಿಕವಾಗ ತೊಡಗಿತು.

ಭಾವ, “ಈವತ್ತೇ ಕಾಲೇಜಿಗೆ ಸೇರಿಸಿಬಿಡ್ತೀನಿ. ವಿನಾಯಕ ಪಾಟೀಲರು ಗೊತ್ತು, ಕೇಳೋಣ. ನಾಳೆಯಿಂದ ನನಗೆ ಆಫೀಸು ಕೆಲಸ. ಬಿಡುವಾಗುವುದಿಲ್ಲ” ಎಂದಾಗ ದೇವರಾಜನಿಗೆ ಯಾಕೋ ಹೆದರಿಕೆಯಾಯ್ತು. ಇನ್ನೂ ಒಂದು ವಾರ ಕಾರವಾರವನ್ನು ಸುತ್ತಾಡಿ ಕಾಲೇಜಿನಲ್ಲಿರುವ ಹುಡುಗರು, ಮಾಸ್ತರು ಒಳ್ಳೆಯವರೆಂದು ಕಾಣಿಸಿದರೆ ಸೇರುವುದು... ಇಲ್ಲದಿದ್ದರೆ ಮಂಡ್ಯಕ್ಕೆ ವಾಪಸ್ಸು ಹೋಗಿಬಿಡಬೇಕು. ಅಲ್ಲಿ ಸರ್ಕಾರಿ ಕಾಲೇಜಿನಲ್ಲಿ ತನ್ನ ಸೋದರಮಾವ ದೇವೇಗೌಡ ಟೈಪಿಸ್ಟು. ತಡವಾಗಿ ಹೋದರೂ ಸೀಟು ಕೊಡಿಸ್ತಾನೆ... ಇತ್ಯಾದಿ ಯೋಚನೆಯಲ್ಲಿದ್ದ. ಭಾವ ಕರೆದಾಗ ವಿಧಿ ಇಲ್ಲದೆ ಎಸ್ಸೆಲ್ಸಿ ಮಾರ್ಕ್ಸ್‌ಕಾರ್ಡ್, ಕ್ಯಾರೆಕ್ಟರ್ ಸರ್ಟಿಫಿಕೇಟ್, ಟಿ.ಸಿ.ಗಳ ಸುರುಳಿಯನ್ನು ಹಿಡಿದುಕೊಂಡು ಭಾವನನ್ನು ಹಿಂಬಾಲಿಸಿದ.

ದೇವರಾಜ ಬಂದಾಗಿನಿಂದ ಗಮನಿಸುತ್ತಲೇ ಇದ್ದ. ಕಾರವಾರದ ಒಬ್ಬ ಹೆಂಗಸೂ ಸೀರೆ ಉಟ್ಟಿರಲಿಲ್ಲ. ಕಚ್ಚೆ ಹಾಕಿದ ಮುದುಕಿಯರ ಹೊರತು ಉಳಿದೆಲ್ಲ ಮಂದಿ ಸ್ಕರ್ಟು ಹಾಕಿದ್ದರು. ಮಂಡಿಯ ಕೆಳಭಾಗದ ನುಣ್ಣನೆಯ ಬಿಳುಪು ನೋಡಲು ದೇವರಾಜನಿಗೆ ಮೊದಮೊದಲು ಸಂಕೋಚ ಅನ್ನಿಸಿದರೂ ಸಾವಿರಾರು ಮೊಣ ಕಾಲುಗಳನ್ನು ಕಂಡ ಮೇಲೆ ‘ಇದೂ ಒಂಥರಾ ಚೆಂದ’ ಅಂತ ಅಂದುಕೊಂಡ. ವಿನಾಯಕ ಪಾಟೀಲರು ಸೀಟು ಕೊಡಿಸಿದರು. “ಚೆನ್ನಾಗಿ ಓದಬೇಕು” ಎಂದು ರಾಗವಾಗಿ ಹೇಳಿ ಕೆಮಿಸ್ಟ್ರಿ ಲ್ಯಾಬ್‌ಗೆ ನಡೆದರು. ಭಾವ ತಮಗೆ ತಿಳಿದಷ್ಟನ್ನು ವಿವರಿಸಿ ಕಾಲೇಜೆಲ್ಲಾ ಸುತ್ತಾಡಿಸಿ ನೋಟೀಸ್‌ಬೋರ್ಡಿನ ಹತ್ತಿರ ಬಂದು ಟೈಂಟೇಬಲ್ ಬರೆಸಿಕೊಟ್ಟು ಅಲ್ಲೆಲ್ಲಾ ಅಡ್ಡಾಡಿಸಿದರು.

ಹುಡುಗ–ಹುಡುಗಿಯರು ಕನ್ನಡವಲ್ಲದ ಭಾಷೆಯಲ್ಲಿ ಗೊಣಗುತ್ತಾ ಸಾಗುತ್ತಿದ್ದರು. ಕೆಲವರು ದೇವರಾಜನನ್ನು ವಿಚಿತ್ರವಾಗಿ ನೋಡಿ ನಗುತ್ತಾ ಹೋದರು. ದೇವರಾಜನಿಗೆ ತಾನು ಚಡ್ಡಿಯಲ್ಲಿರುವುದು ಅರಿವಾಯ್ತು. ಭಾವನಿಗೆ ಪ್ಯಾಂಟು ಬೇಕು ಅಂತ ಒತ್ತಾಯಿಸಿದ. ವಿಚಿತ್ರ ಭಯವಿದ್ದರೂ ಯಾವುದೋ ಗಟ್ಟಿಯಾದ ಸೆಳೆತ ಓದಲೇಬೇಕೆಂದು ಒತ್ತಾಯಿಸಿತು. ಯಾರಾದರೂ ಗಮನಿಸಿಕೊಳ್ಳಲಿ – ತಾನು ಕತ್ತೆತ್ತಿ ಯಾರನ್ನೂ ದಿಟ್ಟಿಸಿ ನೋಡಬಾರದು – ಎಂದು ತೀರ್ಮಾನಿಸಿ ಕತ್ತು ಬಗ್ಗಿಸಿ ಮನೆಗೆ ನಡೆದ.

ಮೊದಲ ದಿನವೇ ದೇವರಾಜನ ಮಾನ ಮೂರು ಕಾಸಿಗೆ ಕ್ಲಾಸಿನಲ್ಲಿ ಇಂಗ್ಲಿಷ್ ಮಾಸ್ತರೆದುರು ಹರಾಜಾಯಿತು. ಇಂಗ್ಲಿಷಿನಲ್ಲೇ ಮಾತನಾಡಿಸಿದರು. ಇತರರಿಗೂ ದೇವರಾಜನನ್ನು ಪರಿಚಯ ಮಾಡಿಕೊಳ್ಳುವ ಅಣಕವೋ ಕುತೂಹಲವೋ ಇತ್ತು. ದೇವರಾಜ